

# ಮಕ್ಕಳನ್ನೇ ಕಾಡುವ ಟೈಪ್ 1 ಮಧುಮೇಹ

ಆಟೊ ಇಮ್ಯೂನ್ ಡಿಸೀಸ್ ಎಂದು ಕರೆಯಲಾಗುವ ಟೈಪ್ 1 ಮಧುಮೇಹ ಮಕ್ಕಳನ್ನೇ ಬಹುವಾಗಿ ಕಾಡುವಂಥದ್ದು. ಮಕ್ಕಳಲ್ಲಿ ಇದನ್ನು ಪತ್ತೆಹಚ್ಚುವುದು ವಿಳಂಬವಾದರೆ ಅಪಾಯ ತಪ್ಪಿದ್ದಲ್ಲ.

■ **ಉಮಾ ಅನಂತ್**

ಕಾಕತಾಳೀಯವೋ ಎಂಬಂತೆ ವಿಶ್ವ ಮಧುಮೇಹ ದಿನಾಚರಣೆ ಹಾಗೂ ಮಕ್ಕಳ ದಿನಾಚರಣೆ ಎರಡೂ ಒಂದೇ ದಿನ ಬಂದಿದೆ. ಈ ಎರಡು ದಿನಾಚರಣೆಗಳಿಗೂ ಹತ್ತಿರದ ನಂಟು ಇದೆ. ಕಾರಣ ಇಷ್ಟೆ. ಮಧುಮೇಹದಲ್ಲಿ ಟೈಪ್ 1 ಮಾದರಿಯದ್ದು ಕಾಡುವುದು ಮಕ್ಕಳನ್ನೇ. ಕೆಲವರಲ್ಲಿ ಇದು ಚಿಕ್ಕ ವಯಸ್ಸಿನಲ್ಲೇ ಪತ್ತೆಯಾಗುತ್ತದೆ, ಇನ್ನೂ ಕೆಲವರಲ್ಲಿ ಹದಿವಯಸ್ಸಿನಲ್ಲಿರುವಾಗ ಬರುತ್ತದೆ. ಬಹುಪಾಲು ಮಕ್ಕಳಲ್ಲಿ ಇರುವ ಟೈಪ್ 1 ಮಧುಮೇಹ ಗುರುತಿಸಲು ತಿಂಗಳು ಹಾಗೂ ವರ್ಷಗಳ ಕಾಲವೇ ಬೇಕಾಗುವುದು. ಈ ಕಾರಣದಿಂದ ಸಕ್ಕರೆ ಕಾಯಿಲೆಯ ಚಿಕಿತ್ಸೆಯೂ ವಿಳಂಬವಾಗುವುದು.

‘ಟೈಪ್ 1 ಮಧುಮೇಹ ಆರು ತಿಂಗಳಿನ ಮಗುವಿನಿಂದ ಹಿಡಿದು 15 ವರ್ಷಗಳವರೆಗೆ ಯಾವಾಗ ಬೇಕಾದರೂ ಬರಬಹುದು. ಇದನ್ನು ಆಟೊ–ಇಮ್ಯೂನ್ ಡಿಸೀಸ್ ಎಂದು ಕರೆಯಲಾಗುತ್ತದೆ. ಇದು ಆನುವಂಶಿಕ ಕಾಯಿಲೆಯಲ್ಲ. ನಮ್ಮ ದೇಹದಲ್ಲಿ ಪ್ಯಾಂಕ್ರಿಯಾಸ್ (ಮೇದೋಜೀರಕ ಗ್ರಂಥಿ) ನಲ್ಲಿರುವ ಬೀಟಾ ಕಣಗಳು ಇನ್ಸುಲಿನ್ ಅನ್ನು ಉತ್ಪತ್ತಿ ಮಾಡುತ್ತದೆ. ಆದರೆ ಕೆಲ ಮಕ್ಕಳ ದೇಹದ ಜೀವಕೋಶದಲ್ಲಿ ಬೇರೆ ಯಾವುದೋ ರೀತಿಯ ಆ್ಯಂಟಿಬಾಡೀಸ್ ಇಲ್ಲವೇ ವೈರಸ್ ಬಂದು ಬೀಟಾ